“ಮೋಹನ್... ಅದರ ಇಂದಿನ ಅರ್ಥವೇ ನಿಮ್ಮನ್ನು ಹೀಗೆ ಬೀಳಿಸಿ ಮರದ ದಿಮ್ಮಿಯಂತೆ ಉರುಳಿಸಿದೆ, ಅರ್ಥವಾಯಿತೇ.”

“ನನಗೆ ಏನನ್ನೂ ನೆನಪು ಮಾಡಬೇಡ ಕಸ್ತೂರ್. ನೋವು ನನ್ನ ಭಾವನೆಗಳನ್ನು ಆಕ್ರಮಿಸಿಕೊಳ್ಳುತ್ತದೆ. ನಾವು ಸ್ವಲ್ಪ ಹೊತ್ತು ಹೀಗೆಯೇ ಮಾತನಾಡುತ್ತಿರೋಣ. ಇದು ನಿನಗಾಗಿಯೇ ಮೀಸಲಾದ ಸಮಯ ಎಂದುಕೋ.”

“ಇಲ್ಲ, ನಿಮ್ಮ ಮುಖ ತುಂಬಾ ಬಾಡಿಹೋಗಿದೆ. ಸ್ವಲ್ಪ ಸುಧಾರಿಸಿಕೊಳ್ಳಿ.”

“ನಿಜ, ಕಸ್ತೂರ್...” ಪದಗಳಾಗಿ ಹುಟ್ಟಿದವು ದನಿಯಾಗಿ ಹೊರಹೊಮ್ಮಲಾಗದೆ ತಡವರಿಸಿದವು.

